ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಕೆಲ್ಲೂರಿನಲ್ಲಿ ಕಟ್ಟತಕ್ಕ ಶಾಲಾಕಟ್ಟಡದ ಬಗ್ಗೆ ತಾವು ಯಾವು ದಾದರೂ ಒಂದು ಪ್ಲಾನನ್ನು ಮಂಜೂರುಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿರತಕ್ಕ ಪಾಠಶಾಲೆಯು strength ಏನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲನೆಯ ವರ್ಷದ ತರಗತಿಯಲ್ಲಿ 63 ಹುಡುಗರು ಮತ್ತು ಎರಡನೆಯ ವರ್ಷದ ತರಗತಿಯಲ್ಲಿ 10 ಹುಡುಗರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರ ಹಿಂದಿನ ವರ್ಷ ಮೊದಲನೆಯ ತರಗತಿಯಲ್ಲಿದ್ದ ಹುಡುಗರ ಸಂಖ್ಯೆ ಎಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪಾಠಶಾಲೆಯ ಬಗ್ಗೆ ಕೆಲವು ದೂರುಗಳು ಬಂದಿದ್ದರಿಂದ ನಾನೇ ಸ್ವಳಕ್ಕೆ ಸರ್‌ಪ್ರೈಜ್ ಆಗಿ ಹೋಗಿ ಪಾಠಶಾಲೆಯನ್ನು ಚೆಕ್‌ಮಾಡಿ ನೋಡಿದ್ದೇನೆ. ಅಲ್ಲಿ ರಿಜಿಸ್ಟರಲ್ಲಿ ದಾಖಲೆ ಇದ್ದಂತೆ 60 ಜನ ಹುಡುಗರು ಇರಲಲ್ಲ. ಆ ಅಕ್ರಮದ ಬಗ್ಗೆ ಅವರಿಗೆ ಶಿಕ್ಷೆ ವಿಧಿಸಬೇಕೆಂದು ಹೇಳಿ ಮುಂದಕ್ಕೆ ಆ ರೀತಿ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ವಾರ್ನ್‌ಮಾಡಿ ಬಂದಿದ್ದೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಆ ಬಗ್ಗೆ ಅವರಮೇಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತೆಗೆದುಕೊಂಡಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಸ್ಕೂಲಿಗೆ ಎಷ್ಟು ಕೊಠಡಿಗಳಿರುತ್ತವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—3-4 ಇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿಗೆ ಎಷ್ಟು ಕಟ್ಟಡದ ಆವಶ್ಯಕತೆಯಿದೆ ಎಂಬುದನ್ನು ತಾವು ಈಗ ಹೇಳಬಲ್ಲಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಷ್ಟೊಂದು ಆವಶ್ಯಕತೆ ಅಲ್ಲಿ ಇರುತ್ತದೆಂದು ನನಗೆ ಕಂಡುಬಂದಿಲ್ಲ.

Mr. SPEAKER.—Too many details regarding a particular building. At this rate even two hours will not be sufficient.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಅಲ್ಲಿಗೆ ಕೊಟ್ಟಿರತಕ್ಕ 4 ಕಟ್ಟಡಗಳ ಬಗ್ಗೆ ಸರ್ಕಾರದವರು ಕೊಡತಕ್ಕ ಗ್ರಾಂಟು ಅರ್ಧ ಹೋಗುತ್ತ ಇನ್ನುಳಿಯತಕ್ಕ ಅರ್ಧ ಗ್ರಾಂಟನ್ನು ಗ್ರಾಮಸ್ಥರಿಂದ ವಸೂಲ್ಮಾಡುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೊನ್ನುಡಿಕೆ ಮಿಡಲ್ ಸ್ಕೂಲಿನ ಅಂದಾಜು ಮೊದಲು ಮಂಜೂರಾದದ್ದು ಯಾವ ವರ್ಷ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮೊದಲು ಈ ಕಟ್ಟಡದ ಬಗ್ಗೆ 12 ಸಾವಿರ ರೂಪಾಯಿಗಳಿಗೆ ಆಗಿದ್ದ ಅಂದಾಜು ಈಗ 22,500 ರೂ.ಗಳಿಗೆ ಏರಬೇಕಾಗಿದ್ದರೆ ಎಷ್ಟು ವರ್ಷ ಆ ಅಂದಾಜು ಪೆಂಡಿಂಗ್ ಇತ್ತೆಂಬುದನ್ನು ತಿಳಿಸಲು ಸಾಧ್ಯವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ವರ್ಷಗಳು ಪೆಂಡಿಂಗ್ ಆಗಿ ಇರಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—10 ವರ್ಷಗಳ ಮೇಲಾಯಿತೆಂದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಈ ಹೊನ್ನುಡಿಕೆ ಕಟ್ಟಡದ ಬಗ್ಗೆ 4,654 ರೂಪಾಯಿಗಳು ಖರ್ಚಾಗಿದೆಯೆಂದು ತೋರಿಸಿದ್ದೀರಿ. ಈ ಪೊಬಲಗು ಏತಕ್ಕಾಗಿ ಖರ್ಚಾಗಿದೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

Mr. SPEAKER.—How can you expect the Hon'ble Minister to remember these things ?

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಲಿಲ್ಲಿ ಇನ್ನೂ ತಳಪಾಯಕೂಡ ಹಾಕಿಲ್ಲ. ಅದನ್ನು ವಿಚಾರಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಕಟ್ಟಡಗಳನ್ನು ಬೇಗ ಕಟ್ಟಿಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುವಾಗುತ್ತದೆ.

Rates raised in the Government Hospitals.

Q.—72 Sri B. C. NANJUNDAIYA (Kora).—

Will the Government be pleased to state :—

(*a*) when the Government introduced the raised rates in the Government hospitals in the State ;

(*b*) the actual amount that they were getting before the raised rates, for the last three years from hospitals in Bangalore and Mysore Cities, in District Headquarter Municipalities and other Taluk Headquarter Municipalities (figures may kindly be supplied yearwar and itemwar) ;

(*c*) the actual amount recovered in the months of January 1953 and February 1953 in Bangalore City area hospitals, Mysore City hospitals, and other City areas, District Headquarter Municipal areas, and Taluk Headquarter areas (figures may kindly be given monthwar and itemwar) ?

A.—Sri T. CHANNIAH (Minister for Public Health and Local Self-Government).—

(*a*) 1st January 1953. This is subsequently revised (*vide* Government Order No. M. 2445-48 -Med. 68-52-8, dated 27th February—3rd March 1953).

(*b*) and (*c*) A statement is enclosed.

Information regarding Taluk hospitals is under compilation.

(SRI T. CHANNIAH.)

[*Vide* REPLY TO CLAUSES (*b*) AND (*c*).]

Statement showing the total amount of Medical fees that the Government were getting before the raised rates for the last three years from Hospitals in the State.

	Particulars	1950	1951	1952
		Rs.	Rs.	Rs.
1	Vani Vilas Hospital, Bangalore	51,496	56,905	50,142
2	Minto Ophthalmic Hospital, Bangalore	4,410	3,108	6,112
3	Bowring and Lady Curzon Hospital, Bangalore ..	64,442	67,054	89,533
4	District Hospital and L.F. Dispensaries in Chitaldrug District.	1,365	1,253	1,379
5	Epidemic Hospital, Mysore	41	120	102
6	District Hospital and L.F. Dispensaries in Tumkur District.	285	147	561
7	McGann Hospital, Shimoga	4,956	6,413	6,602
8	Krishnarajendra Hospital, Mysore	47,705	46,958	48,034
9	Civil Hospital, K.G.F.	1,737	1,995	1,798
10	Mental Hospital, Bangalore	61,786	58,912	57,297
11	Cheluvamba Hospital, Mysore	15,170	15,650	16,223
12	Victoria Hospital, Bangalore	67,025	59,912	93,061
13	Isolation Hospital, Magadi Road, Bangalore	..	..	..
14	Isolation Hospital, Civil Station	..	..	..
15	Palace Dispensary, Mysore	..	..	..
16	S.D.S. Sanatorium, Bangalore	6,927	6,068	11,205
17	Princess Krishnajammanni Sanatorium, Mysore ..	33,268	41,832	47,561
18	General Hospital, Mandya	721	531	806
19	District Hospital, Tumkur	285	147	561
20	Maternity Hospital, K.G.F.	3,744	5,862	8,062
21	Tuberculosis Sanatorium, Civil Station	663	1,151	1,279
	Total ..	3,66,026	3,74,048	4,40,318

Statement showing the total amount of Medical fees recovered in all the Hospitals in the State during the months of January and February 1953.

	Name of the Institution	*Amount of Medical fees collected*	
		1953 *January*	1953 *February*
		Rs. a. p.	Rs. a. p.
1	Mallegowda General Hospital and Dispensaries in Chikmagalur District.	866 2 0	547 15 0
2	Vani Vilas Hospital, Bangalore	3,400 0 0	4,096 14 0
3	Minto Ophthalmic Hospital, Bangalore ..	541 1 0	670 13 0
4	District Hospital and Dispensaries in Chitaldrug District.	1,316 11 0	1,303 13 0
5	Bowring and Lady Curzon Hospital, Bangalore ..	6,793 0 0	6,624 12 0
6	Victoria Hospital, Bangalore	11,376 4 0	7,889 8 0
7	Krishnarajendra Hospital, Mysore	4,703 0 0	4,691 3 0
8	McGann Hospital, Shimoga	705 10 0	312 2 0
9	Civil Hospital, K.G.F.	461 2 0	569 14 0
10	Mental Hospital, Bangalore	4,009 8 0	3,228 5 0
11	Isolation Hospital, Magadi Road, Bangalore ..	58 11 0	72 7 0
12	Isolation Hospital, Civil Station, Bangalore	7 2 0	3 7 0
13	Palace Dispensary, Mysore	250 10 0	218 9 0
14	S.D.S. Sanatorium, Bangalore	862 7 0	784 8 0
15	General Hospital and L.F. Dispensaries in Tumkur District.	1,061 10 0	11,638 15 0
16	Cheluvamba Hospital, Mysore	1,585 6 0	1,265 2 0
17	General Hospital and Dispensaries in Mandya District	342 7 0	302 14 0
18	Princess Krishnajammanni Sanatorium, Mysore ..	4,037 11 0	3,041 3 0
19	Maternity Hospital, K.G.F.	421 1 0	385 6 0
20	Tuberculosis Sanatorium, Civil Station, Bangalore ..	4 15 0	5 3 0
21	Lady Willingdon Tuberculosis Clinic, Bangalore ..	174 7 0	139 0 0
22	Epidemic Diseases Hospital, Mysore	27 8 0	19 8 0
23	Sri Narasimharaja Hospital and Dispensaries in Kolar District.	1,343 13 0	1,320 3 0
24	Medical Institutions in Hassan District	Rs. 2,300 (in January and February 1953)	
	Total ..	44,350 2 0	39,631 8 0

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಆಸ್ಪತ್ರೆಗಳಲ್ಲಿ ರೋಗಿಗಳ ಮೇಲೆ ಹಾಸಿತಕ್ಕ ತುಲ್ಕವನ್ನು ಹೆಚ್ಚಿಸತಕ್ಕ ಒಗ್ಗೆ ಒಂದು ಸಮಿತಿಯನ್ನು ಮಾಡಿ ಅವರ ಅಭಿಪ್ರಾಯವನ್ನು ತಾವು ಪಡೆದುಕೊಂಡಿರಲ್ಲಿಲ್ಲವೇ ?

Mr. SPEAKER.—That was answered last week.

ಶ್ರೀ ಬಿ. ಸಿ. ನಂಜುಂಡಯ್ಯ.—ಆ ಸಮಿತಿಯಲ್ಲಿ ಕೇವಲ ಔಷಧಿ ಕೊಡತಕ್ಕವರಿದ್ದು, ಔಷಧಿ ತೆಗೆದುಕೊಳ್ಳತಕ್ಕವರ ಪರವಾಗಿ ಯಾರೂ ಇರುವುದಿಲ್ಲವಲ್ಲವೇ ?

Mr. SPEAKER.—That was also answered.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಪುನಃ ಈ ಮಾರ್ಚಿ 3ನೆಯ ತಾರೀಖಿನಲ್ಲಿ ರಿವೈಸ್ ಮಾಡಿದ ಆರ್ಡರಿನ ಬಗ್ಗೆ ಆ ಸಮಿತಿ ಅಭಿಪ್ರಾಯವನ್ನು ತಾವು ಪಡೆದಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

9 A.M.

ಶ್ರೀ ಬಿ. ಸಿ. ನಂಜುಂಡಯ್ಯ.—17ನೆಯ ಪುಟದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ಬೆಂಗಳೂರು ಮತ್ತು ಮೈಸೂರು ಸಿಟಿಗಳಲ್ಲಿರುವ ಆಸ್ಪತ್ರೆಗಳಲ್ಲಿ ದರಗಳು ಜಾಸ್ತಿಯಾದ ಮೇಲೆ ಉತ್ಪತ್ತಿ ಜಾಸ್ತಿಯಾಗಿಲ್ಲವೆಂದು ಕಾಣುತ್ತದೆ. ಹಾಗಾದರೆ ರೋಗಿಗಳು ಮೊದಲಿನಷ್ಟು ಹೋಗಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕಡಮೆಯಾಗಿರಬಹುದು. ಆ ಪಟ್ಟಿಯನ್ನು ನೋಡಿದರೆ ಕೆಲವು ಕಡೆ ಹೆಚ್ಚಿಗೆ ಬಂದಿದೆ, ಕೆಲವು ಕಡೆ ಕಡಮೆ ಬಂದಿದೆಯೆಂದು ಗೊತ್ತಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಬೆಂಗಳೂರು, ಮೈಸೂರು ಸಿಟಿಗಳ ಆಸ್ಪತ್ರೆಗಳ ವಿಚಾರ ನಾನು ಹೇಳುತ್ತಿದ್ದೇನೆ. ಇಲ್ಲಿ ಒಂದು ಆಸ್ಪತ್ರೆ ವಿನಾಯಿಸಿ ಮಿಕ್ಕೆಲ್ಲ ಆಸ್ಪತ್ರೆಗಳಲ್ಲಿಯೂ ಕಡಮೆಯಾಗಿದೆಯಲ್ಲವೇ ?

Mr. SPEAKER.—The figures speak for themselves.

ಶ್ರೀ ಬಿ. ಸಿ. ನಂಜುಂಡಯ್ಯ.—ದರಗಳು ಜಾಸ್ತಿ ಮಾಡುವುದಕ್ಕೆ ಮುಂಚೆ ಪ್ರತಿಯೊಬ್ಬರಿಂದಲೂ ಒಂದಾಣೆ ತೆಗೆದುಕೊಳ್ಳುತ್ತಿದ್ದುದನ್ನೂ ಈಗ ನಿಲ್ಲಿಸಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಹಿಂದೆ ಮೈಸೂರು ಬೆಂಗಳೂರು ಸಿಟಿಗಳಲ್ಲಿ out-patients ಹತ್ತಿರ ಚಾರ್ಜ್ ತೆಗೆದುಕೊಳ್ಳುತ್ತಿದ್ದರು. ಈಚೆಗೆ 3-3-51ರ ಸರ್ಕಾರಿ ಹುಕುಮಿನ ಪ್ರಕಾರ ಅದನ್ನು ನಿಲ್ಲಿಸಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ನವಂಬರಿನಲ್ಲಿ ದರಗಳನ್ನು ಜಾಸ್ತಿಮಾಡುವುದಕ್ಕೆ ಮುಂಚೆ ಒಂದಾಣೆಯನ್ನು ರೋಗಿಗಳಿಂದ ತೆಗೆದು ಕೊಳ್ಳುತ್ತಿದ್ದರಲ್ಲ, ಈಗ ಅದನ್ನೂ ನಿಲ್ಲಿಸಿದ್ದಾರೆಯೇ ?

Sri T. CHANNIAH.—Government have passed orders abolishing the levy of fees.

ಶ್ರೀ ವಿ. ವೆಂಕಟಪ್ಪ.—17ನೆಯ ಪುಟದಲ್ಲಿ, ಕೊಟ್ಟಿರುವ ಪಟ್ಟಿಯಲ್ಲಿ General Hospital and L. F. Dispensaries in Tumkur District ಎಂಬುದಕ್ಕೆ ಸಂಬಂಧಪಟ್ಟಂತೆ ಜನವರಿ ತಿಂಗಳಿನಲ್ಲಿ 1061 ರೂಪಾಯಿಗಳ ಉತ್ಪತ್ತಿಯೆಂದೂ, ಫೆಬ್ರುವರಿ ತಿಂಗಳಿಗೆ 11,638 ರೂಪಾಯಿಗಳ ಉತ್ಪತ್ತಿಯೆಂದೂ ಹೇಳಿದ್ದೀರಿ. ಇದು ಸರಿಯೇ ?

ಶ್ರೀ ಟಿ. ಚನ್ನಯ್ಯ.—"Printer's Devil" ಇರಬಹುದು.

Chintamani Municipality.

Q.—625. Sri M. C. **ANJANEYA REDDY** (Chintamani).—

Will the Government be pleased to state :—

(*a*) whether it has come to their notice that the Chintamani Municipality have decided to form sites to be disposed of by public auction of the vacant lands lying between the compound of the Local Fund Dispensary and M. G. Road in the North and Bangalore Road in the East;

(*b*) whether these lands on which buildings are to be built belong to the Municipality or to the Public Works Department; and if it belongs to the former, the number of feet of space on the road side that has to be left for the Public Works Department ?

A.—Sri T. CHANNIAH (Minister for Public Health and Local Self-Government).—

(*a*) The Municipal Council, Chintamani, decided in 1949-50 to form sites in front of the Local Fund Dispensary and to dispose them off in public auction and to earmark the amount realised from the sites for the construction of the combined Hospital at Chintamani.

(*b*) The ownership of the land is in dispute. This will be examined and a final decision arrived at.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮರಾಮತ್ತು ಇರಾಖೆಯವರಿಗೆ ರಸ್ತೆಯ ಪಕ್ಕದಲ್ಲಿ ಮೂರು ಅಡಿ ಸೇರುತ್ತದೆಂದು ಹೇಳಿದ್ದೀರಿ. ಹಾಗಿದ್ದ ಮೇಲೆ ಈ ಪ್ರದೇಶ ಮರಾಮತ್ತು ಇರಾಖೆಯವರಿಗೆ ಸೇರಿದ್ದೆಂದು ಏಕೆ ಉತ್ತರದಲ್ಲಿ ಹೇಳಿಲ್ಲ.

ಶ್ರೀ ಟಿ. ಚನ್ನಯ್ಯ.—ಮರಾಮತ್ತು ಇರಾಖೆಯವರಿಗೆ ಸೇರಿದೆಯೇ ಅಥವಾ ಮುನಿಸಿಪಾಲಟಿಯವರಿಗೆ ಸೇರಿದೆಯೇ ಎಂಬುದು dispute ನಲ್ಲಿದೆ. ಅದಿನ್ನೂ ತೀರ್ಮಾನವಾಗಿಲ್ಲದಿರುವುದರಿಂದ ಉತ್ತರ ಕೊಟ್ಟಿಲ್ಲ.